

ಪತ್ನಿ ಸಿದ್ದಮ್ಮ ಅವರೊಂದಿಗೆ ಚೆನ್ನಣ್ಣ

ನಡೆಯುತ್ತಿದೆ. ಅಲ್ಲಿ ಅಮಿತಾಭ್ ಕೂಡ ಇದ್ದಾರೆ. ವಾಲೀಕಾರರು ದೌಡಾಯಿಸಿ ಬಾಗಿಲು ಬಳಿ ಕಾಯುತ್ತ ನಿಂತಿರುವರು. ಬಚ್ಚನ್ ಹೊರಗೆ ಬರುವುದೇ ತಡ, ಇವರು 'ಬಚ್ಚನ್ ಜೀ ಮೈ ಕಲಬುರ್ಗಿ ಸೆ ಆಯಾ ಹೂಂ' ಅಂತ ಕೂಗಿದರು. ಬಚ್ಚನ್ ಇವರ ಕಡೆ ಕೈ ಮಾಡಿ ಮುಗುಳ್ನಕ್ಕು ಮುಂದೆ ಹೆಜ್ಜೆ ಇಟ್ಟರಂತೆ. ಆಗ ನನ್ನ ಗುರುಗಳು ಮತ್ತೆ 'ಬಚ್ಚನ್ ಜೀ ಮೈ ಶಾಯರ್ ಹೂಂ' ಅಂದರು. ಆಗ ಅಮಿತಾಬ್ ಬಚ್ಚನ್ ಹಿಂತಿರುಗಿ ಬಂದು ಇವರ ಕೈಕುಲುಕಿ 'ಮೇರೆ ಬಾಪ್ ಭೀ ಶಾಯರ್ ಥೇ' ಅಂದರಂತೆ. ಇದನ್ನು ಅನೇಕ ಸಲ ಹೇಳಿಕೊಳ್ಳುತ್ತಿದ್ದರು.

ಬರವಣಿಗೆಯಲ್ಲಿ ಹೆಚ್ಚು ವೈಚಾರಿಕವಾಗಿರುತ್ತಿದ್ದ ವಾಲೀಕಾರರು ತರಗತಿಗಳಲ್ಲಿ ಮಾತ್ರ ತುಂಬಾ ವಿಭಿನ್ನ. ಅದೊಂದು ಭಾವುಕಲೋಕ. ಪಾಠ ಮಾಡುವಾಗ ಪಾತ್ರಗಳ ಮೇಲಿನ ಶೋಷಣೆಗೆ ಮರುಗುತ್ತಿದ್ದರು. ಸಿಟ್ಟಿನಿಂದ ಕುದಿಯುತ್ತಿದ್ದರು. ಶತ್ರುಗಳನ್ನು ಗುದ್ದಲು ಗಾಳಿಯಲ್ಲಿ ಕೈ ಬೀಸುತ್ತಿದ್ದರು. ಕಾಲನ್ನು ನೆಲಕ್ಕೆ ಗುದ್ದಿ ಹಿಸುಕಿದಂತೆ ಮಾಡುತ್ತಿದ್ದರು. ದವಡೆಯ ಹಲ್ಲುಗಳನ್ನು ಅವಡುಗಚ್ಚಿ ಸಿಟ್ಟು ಹೊರಹಾಕುತ್ತಿದ್ದರು. ಒಮ್ಮೊಮ್ಮೆ ಮುಖ ಸಣ್ಣಗೆ ಮಾಡಿಕೊಂಡು ಅಸಹಾಯಕರಾಗುತ್ತಿದ್ದರು. ಕೋಣೆಯ ಉದ್ದಕ್ಕೂ ಓಡಾಡಿಕೊಂಡು ಪಾಠ ಮಾಡುತ್ತ ತರಗತಿಗಳನ್ನು ಅಕ್ಷರಶಃ ರಂಗಭೂಮಿಯಾಗಿಸಿದ್ದರು. ನಮಗಿದೆಲ್ಲ ಹೊಸದು. ಆದರೆ ಅವರ ಉತ್ಸಾಹ ಬೆಚ್ಚಿಬೀಳಿಸುತ್ತಿತ್ತು. ಅವರೊಮ್ಮೆ ಕುಂವೀ ಅವರ 'ಕಪ್ಪು' ಕಾದಂಬರಿ ಕಲಿಸುತ್ತಿದ್ದರು. ಅದರಲ್ಲಿ ಅತ್ಯಾಚಾರಕ್ಕೊಳಗಾದ ಹೆಣ್ಣಿನ ಪಾತ್ರವಿದೆ. ಅದನ್ನು ಕಲಿಸುತ್ತ ಕನಲಿದರು; 'ಅಯ್ಯೋ ನನ್ನ ತಂಗಿಯ ಮೇಲೆ ನೀಚರು ಅತ್ಯಾಚಾರ ಮಾಡಿದರು, ಬಡವರಿಗೆ ಉಳಿಗಾಲವಿಲ್ಲವೆ? ಅವರು ಬದುಕಬಾರದೆ? ಅವರು ಇನ್ನೂ ಎಷ್ಟು ದಿನ ಅಂತ ಇಂಥ ಬದುಕು ಬದುಕಬೇಕು? ಇದಕ್ಕೆ ಕೊನೆ ಎಂದು?' ಅಂತ ದೀರ್ಘ ದನಿಯಲ್ಲಿ ಗೋಳಾಡಿದರು. ನಮಗೂ ಮನಸ್ಸು ಒಂಥರ ಕಸಿವಿಸಿಗೊಳಗಾಯಿತು. ನಂತರ ತಮ್ಮ ಗುಬ್ಬಿ ಕಣ್ಣುಗಳಿಂದ ನಮ್ಮತ್ತ ನೋಡಿ 'ನನ್ನ ತಂಗಿಯ ಮೇಲೆ ಅತ್ಯಾಚಾರ ಮಾಡಿದವರು